ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ,
ಬೆಳಗುಂಬ ರಸ್ತೆ, ತುಮಕೂರು.
ದಿನಾಂಕ : 22/12/06

ಸಂಖ್ಯೆ ಟಿಯುಡಿಎ / ಎಲ್‌ಎಓ / *212* / 2005-06
897

**ಶ್ರೀ ಆರ್. ರಂಗಸ್ವಾಮಿ**
ಗೀತಾ ನಿಲಯ,
ಮಧುಗಿರಿ ರಸ್ತೆ,
ವೆಂಕಟೇಶಪುರ, ಸಿರಾ ಗೇಟ್,
ತುಮಕೂರು.

**ಮಾನ್ಯರೆ,**

**ವಿಷಯ :** ತುಮಕೂರು ತಾಲ್ಲೂಕು, ಅಂತರಸನಹಳ್ಳಿ ಗ್ರಾಮದ ಸರ್ವೆ ನಂಬರ್ 94 ರಲ್ಲಿ 1 ಎಕರೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಲೇಔಟ್ ಮಾಡಿಕೊಡುವ ಬಗ್ಗೆ.

**ಉಲ್ಲೇಖ :** 1. ನಿಮ್ಮ ಅರ್ಜಿ ದಿನಾಂಕ **21-09-2005**
2. ಪ್ರಾಧಿಕಾರಕ್ಕೆ ಉತ್ತಮತೆ ಶುಲ್ಕ ಪಾವತಿಸಿದ ರಸೀದಿ ಸಂಖ್ಯೆ:12667 ರೂ.**5,049** (ಐದು ಸಾವಿರದ ನಲವತ್ತೊಂಭತ್ತು ರೂಪಾಯಿಗಳು ಮಾತ್ರ) ದಿನಾಂಕ **22-12-2006**
3. ಪ್ರಾಧಿಕಾರದ ಸಭೆಯ ದಿನಾಂಕ **18-10-2006** ರ ವಿಷಯ ಸಂಖ್ಯೆ **12.**

* * * * *

ವಿಷಯಕ್ಕೆ ಸಂಬಂಧಿಸಿದಂತೆ, ನೀವುನೀಡಿರುವ ಅರ್ಜಿಯನ್ನು ಪರಿಶೀಲಿಸಲಾಗಿ, ಅನುಮತಿ ನೀಡುವ ಸಂಬಂಧ ಪಾವತಿಸಿದ ಶುಲ್ಕಗಳನ್ನು ಪರಿಗಣಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(1) ರನ್ವಯ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987 ರ ನಿಯಮದಂತೆ ಈ ಕೆಳಕಂಡ ಷರತ್ತುಗಳೊಂದಿಗೆ ನಕ್ಷೆಯನ್ನು ಅನುಮೋದಿಸಲಾಗಿದೆ.

1. ಈಗ ನೀಡಿರುವ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ.
2. ಅನುಮೋದಿತ ರೂಪರೇಖಾ ನಕ್ಷೆಯಂತೆ ವಿನ್ಯಾಸವನ್ನು ಜಮೀನಿನಲ್ಲಿ ಅಭಿವೃದ್ಧಿಪಡಿಸಿದ ನಂತರವೇ ಅಂದರೆ ರಸ್ತೆಯ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಕರ್ಯ, ವಿದ್ಯುತ್ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಿಸಿದ ನಂತರ ಈ ಪ್ರಾಧಿಕಾರದ ಪರಿಶೀಲನೆಗಾಗಿ ತಿಳಿಸತಕ್ಕದ್ದು ಮತ್ತು ಪ್ರಾಧಿಕಾರದಿಂದ ವಿನ್ಯಾಸಕ್ಕೆ ಅಂತಿಮ ಅನುಮೋದನೆ ಪಡೆಯತಕ್ಕದ್ದು.
3. ವಿನ್ಯಾಸ ಪ್ರದೇಶವನ್ನು ಈ ಪ್ರಾಧಿಕಾರದ ಅನುಮೋದನೆ ನೀಡಿದ 18 ತಿಂಗಳ ಒಳಗಾಗಿ ಸಂಪೂರ್ಣವಾಗಿ (ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ) ಅಭಿವೃದ್ಧಿಪಡಿಸತಕ್ಕದ್ದು. ತಪ್ಪಿದ್ದಲ್ಲಿ ಈ ಅನುಮೋದನೆಯು ಯಾವ ಸೂಚನೆಯೂ ಇಲ್ಲದೆ ತಂತಾನೆ ರದ್ದಾಗುತ್ತದೆ.

೮

4. ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವೇಜಾ ಟ್ರೀಟ್‌ಮೆಂಟ್ ಪ್ಲಾಂಟ್ ಅನ್ನು ಸ್ಥಾಪಿಸಬೇಕು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ದಿನಾಂಕ 21-11-2005 ರ ಪತ್ರ ಸಂಖ್ಯೆ 217/KSPCB/RO-BNG(S-II)CFE/-2005-2006/5361 ಷರತ್ತುಗಳನ್ನು ತಪ್ಪದೇ ಅನುಸರಿಸತ್ಕದ್ದು.
5. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸ್ಯಗಳನ್ನು ಬೆಳೆಸುವುದು.
6. ಅನುಮೋದಿತ ವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್‌ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
7. ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿರುವ ಪ್ರದೇಶಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸತ್ಕದ್ದು.
8. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಈ ಕೆಳಗಿನ ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯ ಕೂಡಲೇ ರದ್ದಾಗುವುದು.
9. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕ ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
10. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ, ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಮತ್ತು ಉಪಯೋಗಿಸಲು ಬರುವುದಿಲ್ಲ.
11. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.
12. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೆ ರದ್ದುಗೊಳ್ಳುತ್ತದೆ.
13. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಪ್ರಚಾರದಲ್ಲಿ ಪ್ರಾಧಿಕಾರದಿಂದ ಅನುಮೋದನೆ ಆಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
14. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Foot Path) ನಿರ್ಮಿಸುವುದು.
15. ಅರ್ಜಿದಾರರ ಮನವಿಯಂತೆ ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ / 112 / ಬೆಂರೂಪ್ರಾ / 2005 ದಿನಾಂಕ 26-05-2005 ರಲ್ಲಿನ ಮಾರ್ಗಸೂಚಿಯಂತೆ ಈ ಕೆಳಕಂಡ ನಿವೇಶನಗಳನ್ನು ನೊಂದಣಿಗಾಗಿ ಬಿಡುಗಡೆ ಮಾಡಲಾಗಿದೆ.

| ಕ್ರ.ಸಂ. | ವಿಸ್ತೀರ್ಣ | ನಿವೇಶನಗಳ ಸಂಖ್ಯೆ | ಒಟ್ಟು |
|---|---|---|---|
| 1. | 30x40 | 6, 7, 9, 11, 13, 15, 17 | 07 |
| 2. | 22X40 | 19 | 01 |
| 3. | ಅನಿಯಮಿತ | 2, 3, 4, 18 | 04 |
| | | **ಒಟ್ಟು** | **12** |

ತಮ್ಮ ನಂಬುಗೆಯ,

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

**ಪ್ರತಿಯನ್ನು**
**ಉಪನೋಂದಣಾಧಿಕಾರಿಗಳು, ತುಮಕೂರು ತಾಲ್ಲೂಕು, ತುಮಕೂರು ರವರಿಗೆ ನಕ್ಷೆಯೊಂದಿಗೆ ಕಳುಹಿಸಿದೆ.**







KEY MAP

## LAND USE ANALYSIS

| USE | AREA IN SFT | % |
|---|---|---|
| RESIDENTIAL | 21370.00 | 49.05 |
| COMMERCIAL | 1100.00 | 2.53 |
| PARK | 4356.00 | 10.00 |
| ROADS | 16734.00 | 38.42 |
| TOTAL | 43560.00 | 100.00 |

SCALE: 1"=50'0"

| ಕ್ರ.ಸಂ | ನಿವೇಶನದ ಅಳತೆ | ನಿವೇಶನ ಸಂಖ್ಯೆಗಳು | ಒಟ್ಟು |
|---|---|---|---|
| 01 | 30'x40' | 6, 7, 9, 11, 13, 15, 17 | 07 |
| 02 | 22'x40' | 19 | 01 |
| 03 | [illegible] | 2, 3, 4, 18 | 04 |
| | | ಒಟ್ಟು | 12 |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

# GOVERNMENT OF KARNATAKA

## TUMKUR URBAN DEVELOPMENT AUTHORITY

## TUMKUR

TOWN PLANNING MEMBER
TUDA
TUMKUR

COMMISSIONER
TUDA
TUMKUR

| DRN BY | CKD BY | DRG No |
|---|---|---|

TITLE: PROPOSED RESIDENTIAL LAY OUT PLAN IN SY No 94 OF ANTHARASANAHALLI TUMKUR